# "ಶರಣ್ಯ"

## ಗ್ರಾಮೀಣ ನೋವು ಉಪಶಮನ ಆರೈಕೆ ಮತ್ತು ಸಂಶೋಧನ ಕೇಂದ್ರ

ಸಂದರ್ಶನ: ಶ್ರೀ ಡಿ.ಎಲ್. ಮಂಜುನಾಥ್, ನಿರ್ವಾಹಕ ಟ್ರಸ್ಟಿಗಳು, ಶರಣ್ಯ ಕೇಂದ್ರ.

ಸಂದರ್ಶಿಸಿದವರು: 1) ಡಾ.ಎಸ್.ಎಸ್.ಬಾಪಟ್, ಟ್ರಸ್ಟಿಗಳು, ಡಿವೈನ್‌ಪಾರ್ಕ್ ಟ್ರಸ್ಟ್ (ರಿ.)
2) ಪ್ರೊ. ವೆಂಕಟೇಶಮೂರ್ತಿ ಶಿವಮೊಗ್ಗ C2 ಅಧಿಕಾರಿ, ಡಿವೈನ್‌ಪಾರ್ಕ್ ಟ್ರಸ್ಟ್ (ರಿ.)
3) ಪ್ರೊ. ವಿಜಯಕೃಷ್ಣ ಆರಾಧ್ಯ, ಶಿವಮೊಗ್ಗ.

ಶಿವಮೊಗ್ಗ ನಗರದಿಂದ 15ಕಿ.ಮೀ. ದೂರದ ಗಾಜನೂರು ಎಂಬುದು ತುಂಗಾನದಿಯ ದಡದ ಮೇಲಿರುವ ಒಂದು ಸಣ್ಣ ಹಳ್ಳಿ, ನದಿ, ತೋಟ, ಗದ್ದೆ, ಮಲೆನಾಡಿನ ನಿತ್ಯ ಹರಿದ್ವರ್ಣ ಕಾಡಿನ ಪರಿಸರದಲ್ಲಿರುವ ಈ ಹಳ್ಳಿಯಲ್ಲಿ ಸುಮಾರು ಹತ್ತು ಎಕರೆ ಪ್ರದೇಶದಲ್ಲಿ ಉಲ್ಬಣಿಸಿದ ರೋಗಿಗಳ (Crtitical Stage) ಶುಶ್ರೂಷೆಗೆಂದೇ (Palliative Care) ಕೆಲಸ ಮಾಡುತ್ತಿರುವ ಸಂಸ್ಥೆಯೊಂದು ತಲೆ ಎತ್ತಿ ನಿಂತಿದೆ. ಸುಮಾರು 18 ವರ್ಷಗಳಿಂದ ಈ ಸಂಸ್ಥೆಯು, ಮನೆಯಲ್ಲಿ ಆರೈಕೆ ಮಾಡಲು ಸಾಧ್ಯವಾಗದ ಉಲ್ಬಣಿಸಿದ ರೋಗದಿಂದ ಬಳಲುತ್ತಿರುವವರ ಆರೈಕೆಯನ್ನು ಮಾಡುತ್ತ ಬಂದಿದೆ. ಸಂಪೂರ್ಣ ಉಚಿತವಾಗಿ, ಸೇವಾ ಮನೋಭಾವದಿಂದ ದುಡಿಯುತ್ತಿರುವ "ಶರಣ್ಯ" ಸಂಸ್ಥೆಯ ಕೆಲಸಗಳು ನಿಜವಾಗಿಯೂ ವಿಶಿಷ್ಟ, ವಿಶೇಷ ಹಾಗೂ ಇತರರಿಗೆ ಆದರ್ಶವಾಗಿರುವಂಥದ್ದು. ನಾವೀಗ ಈ ಕೇಂದ್ರದ ಕಾರ್ಯಚಟುವಟಿಕೆಗಳನ್ನು ತಿಳಿಯುವ ಪ್ರಯತ್ನ ಮಾಡೋಣ. ಸಂಸ್ಥೆಯ ನಿರ್ವಾಹಕ ಟ್ರಸ್ಟಿ ಆಗಿರುವ ಶ್ರೀ.ಡಿ.ಎಲ್. ಮಂಜುನಾಥ್‌ರವರ ಸಂದರ್ಶನದ ಆಯ್ದ ಮುಖ್ಯ ವಿವರಗಳು:-



ಹೊರ ನೋಟ



ಸಂದರ್ಶಕರು



ನಿತ್ಯಾರೋಗ್ಯದ ಆಕಾಂಕ್ಷಿಗಳು

**1) ಸಂಸ್ಥೆಯ ಪ್ರಾರಂಭದ ಹಿನ್ನೆಲೆ ಏನು? ಸ್ಫೂರ್ತಿ ನೀಡಿದವರು ಯಾರು?**

- ನಮ್ಮ ತಂದೆಯವರಾದ ದಿವಂಗತ ಡಿ.ಎಸ್.ಲಕ್ಷ್ಮೀನಾರಾಯಣ ಶೆಟ್ಟರ ಇಚ್ಛೆಯಂತೆ 2002ರಲ್ಲಿ ಸಮಾಜ ಮುಖಿ ಸೇವಾ ಕಾರ್ಯಗಳನ್ನು ಮಾಡುವ ಆಲೋಚನೆಯೊಂದಿಗೆ DSL Trust ಸ್ಥಾಪನೆಯಾಯಿತು. ಈ ಟ್ರಸ್ಟಿನ ಸೇವಾಯೋಜನೆಯ ಭಾಗವಾಗಿ 2004ರಲ್ಲಿ "ಶರಣ್ಯ" ಕೇಂದ್ರವನ್ನು ಆರಂಭಿಸಲಾಯಿತು. ಪ್ರಾರಂಭದಲ್ಲಿ ಈ ರೀತಿ ಅಸಹಾಯಕ ಪರಿಸ್ಥಿತಿಯಲ್ಲಿರುವ ರೋಗಿಗಳ ಆರೈಕೆ ಮಾಡುತ್ತಿರುವ ಬೆಂಗಳೂರು, ಮುಂಬೈನ ಕೇಂದ್ರಗಳಿಗೆ ಭೇಟಿ ನೀಡಿದಾಗ ನಮ್ಮ ಮನಸ್ಸಿನಲ್ಲಿಯೂ ಈ ಆಲೋಚನೆ ಮೂಡಿತ್ತು. ಆ ಸಂದರ್ಭದಲ್ಲಿ ಡಾ. ಎಸ್. ಎಲ್. ಭೈರಪ್ಪನವರ ಅನಿರೀಕ್ಷಿತ ಭೇಟಿಯಾಗಿ ಅವರ ಅನುಭವದ ನುಡಿಗಳು ನಮಗೆ ಸ್ಫೂರ್ತಿ ನೀಡಿತ್ತು. ಈ ರೀತಿಯ ಸೇವೆ ಹೊಸದು, ಇದರ ಆಳ, ವಿಸ್ತಾರದ ತಿಳುವಳಿಕೆ ನಮಗೆ ಇರಲಿಲ್ಲ.

ಮಹಿಮೆಯ ಮೆಲುಕು

**ಟ್ರಸ್ಟಿನ ಪರಿಚಯ:-**

ಕರ್ನಾಟಕ ವಿಧಾನ ಪರಿಷತ್‌ನ ಮಾಜಿ ಸಭಾಧ್ಯಕ್ಷರಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ನಮ್ಮ ಸಂಸ್ಥೆಯ ಗೌರವಾಧ್ಯಕ್ಷರು. ನಮ್ಮ ತಾಯಿಯವರಾದ ದಿ। ಡಿ.ಎಲ್. ನೀಲಮ್ಮನವರು ಸ್ಥಾಪಕ ಅಧ್ಯಕ್ಷರು. ಪ್ರಸ್ತುತ ಶ್ರೀ ಟಿ.ಆರ್. ಅಶ್ವತ್ಥನಾರಾಯಣ ಶೆಟ್ಟಿಯವರು ಅಧ್ಯಕ್ಷರಾಗಿ ಹಾಗೂ ಶ್ರೀ ಡಿ.ಎಲ್. ಮಂಜುನಾಥ್‌ರವರು ನಿರ್ವಾಹಕ ಟ್ರಸ್ಟಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರಾರಂಭದ ಕೆಲವು ವರ್ಷಗಳಲ್ಲಿ ಮನೆ-ಮನೆಗಳಿಗೆ ತೆರಳಿ ರೋಗಿಗಳ ಶುಶ್ರೂಷೆ (Mobile Unit) ಯನ್ನು ಮಾಡಲಾಗುತ್ತಿತ್ತು. ಆ ದಿನಗಳಲ್ಲಿ ನಮಗೆ ರೋಗಿಗಳ ಅಸಹಾಯಕ ಪರಿಸ್ಥಿತಿಯ ನೈಜ ಅರಿವಾಯಿತು. ನಮ್ಮ ಭೇಟಿಗಾಗಿ ಕಾಯುತ್ತಿರುವ ಸನ್ನಿವೇಶ ನಿಜಕ್ಕೂ ನಮ್ಮ ಹೃದಯವನ್ನು ತಟ್ಟಿತು.

**2) ಸಂಸ್ಥೆಯ ಧ್ಯೇಯೋದ್ದೇಶಗಳು ಯಾವುವು? ಹಾಗೂ ಹೇಗೆ ಕಾರ್ಯಗತವಾಗುತ್ತಿವೆ?**

- ಸಾಮಾನ್ಯವಾಗಿ ಈ ರೀತಿಯ ರೋಗಿಗಳು ಮನೆಯವರ, ಬಂಧುಗಳ ಅಲಕ್ಷ್ಯಕ್ಕೆ ಒಳಗಾಗುತ್ತಾರೆ. ಬದುಕು ಯಾತನಾಮಯ, ಅಸಹನೀಯವಾಗಿರುತ್ತದೆ. ಕೆಲವೊಮ್ಮೆ ದೈಹಿಕ ಹಾಗೂ ಮಾನಸಿಕ ಹಿಂಸೆಗೂ ಒಳಗಾಗುತ್ತಾರೆ. ಮನೆಯ ವಾತಾವರಣ ಮತ್ತು ಪರಿಸರ ಬೇರೆ ಬೇರೆ ಕಾರಣಗಳಿಂದಾಗಿ ಕಲುಷಿತವಾಗಿದ್ದು ನಿರ್ವಾಹಕರಿಗೂ ತುಂಬಾ ಕಷ್ಟವನ್ನು, ಸಂದಿಗ್ಧತೆಯನ್ನು ನೀಡುತ್ತಿರುತ್ತದೆ. ಸೇವಾ ಮನೋಭಾವದಿಂದ ಕೆಲಸಮಾಡುವ ಶುಶ್ರೂಷಕರು ಸಿಗುವುದು ದುರ್ಲಭವಾಗಿದೆ. ಇವನ್ನೆಲ್ಲ ನೋಡಿದಾಗ ನಮ್ಮ ಮನಸ್ಸಿಗೆ ಬಂದ ಯೋಚನೆಗಳು ಹೀಗಿವೆ ಮತ್ತು ಅವೇ ಸಂಸ್ಥೆಯ ಧ್ಯೇಯ ಕೂಡ-

1) ತೀವ್ರ ಅಸಹಾಯಕರಾದ ರೋಗಿಗಳಿಗೆ ಗೌರವಯುತವಾದ ಜೀವನವನ್ನು ಒದಗಿಸುವುದು.
2) ಪ್ರೀತಿ, ಅನುಕಂಪಗಳಿಂದ ಕೂಡಿದ ಗುಣಮಟ್ಟದ ಆರೈಕೆಯನ್ನು ನೀಡಿ ರೋಗಿಗಳ ಬದುಕು ಸಹನೀಯವಾಗುವಂತೆ (ನೋವು ರಹಿತ) ಮಾಡುವುದು.
3) ನೈಸರ್ಗಿಕ ಪರಿಸರದಿಂದ ಕೂಡಿದ ವಾತಾವರಣದಲ್ಲಿ ಆ ರೋಗಿಗಳು ಸಮಾಧಾನದಲ್ಲಿರುವಂತೆ ನೋಡಿಕೊಳ್ಳುವುದು.
4) ಧಾರ್ಮಿಕ, ಆಧ್ಯಾತ್ಮಿಕ ಚಿಂತನೆಯನ್ನು ಅವರಿಗೆ ರೂಢಿಸುವ ಪ್ರಯತ್ನವೂ ಇದೆ.

**3) ಸಂಸ್ಥೆಯ ಕಾರ್ಯ ಬಾಹುಳ್ಯದ ವಿವರ ನೀಡುವಿರಾ? ಪ್ರವೇಶದ ಅರ್ಹತೆ ಏನು? ದೊರೆಯುವ ಸೌಲಭ್ಯಗಳು ಹಾಗೂ ವೈದ್ಯಕೀಯ ವ್ಯವಸ್ಥೆ ಹೇಗೆ?**

- ಯಾವುದೇ ಕಾಯಿಲೆಯ ಉಲ್ಬಣಾವಸ್ಥೆಯನ್ನು ತಲುಪಿದ (Crtitical Stage) ಎಲ್ಲ ರೋಗಿಗಳಿಗೂ ಅವಕಾಶವಿದೆ-ಕ್ಯಾನ್ಸರ್ ಪೀಡಿತರು, ನರರೋಗಿಗಳು, ಪೂರ್ತಿಯಾಗಿ ಪಾರ್ಶ್ವವಾಯು ಪೀಡಿತರು, ಮಿದುಳು ರಕ್ತಸ್ರಾವದವರು, ಬೆನ್ನುಮೂಳೆಯ ಘಾಸಿಗೊಳಗಾದವರು ಇತ್ಯಾದಿ ರೋಗಿಗಳು. ಆದರೆ ಕ್ಯಾನ್ಸರ್ ಪೀಡಿತ ರೋಗಿಗಳಿಗೆ ಮೊದಲ ಆದ್ಯತೆಯನ್ನು ನೀಡುತ್ತೇವೆ. ಜಾತಿ, ಮತ, ಲಿಂಗ ಹಣವಂತ, ಬಡವ ಎಂಬ ತಾರತಮ್ಯವಿಲ್ಲ ಯಾರಿಗೂ ಸೇವಾಶುಲ್ಕವಿಲ್ಲ, ಎಲ್ಲಾ ಸೇವೆಗಳೂ ಉಚಿತವಾಗಿರುತ್ತವೆ.

- ನಮ್ಮಲ್ಲಿ ವೈದ್ಯಕೀಯವಾಗಿ ಬೇಕಾಗಿರುವ ಎಲ್ಲಾ ಸೌಲಭ್ಯಗಳು ಲಭ್ಯವಿದೆ. ಇಪ್ಪತ್ತು ಹಾಸಿಗೆಗಳ ಆಧುನಿಕವಾಗಿ ಸುಸಜ್ಜಿತವಾದ ವಾರ್ಡ್ ನಮ್ಮಲ್ಲಿದೆ. ಅಗತ್ಯವಿರುವ ತಜ್ಞ ವೈದ್ಯರು, ಶುಶ್ರೂಷಕರು, ದಾದಿಯರು, ಅಡುಗೆ ತಯಾರಿಸುವವರೂ ಇದ್ದಾರೆ. ವ್ಯವಸ್ಥೆಯ ಮೇಲ್ವಿಚಾರಣೆಗೆ ವಾರ್ಡ್ ನಿರ್ವಾಹಕ ಹಾಗೂ ಮ್ಯಾನೇಜರ್ ಇದ್ದಾರೆ.
- ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ವಾರ್ಡ್‌ಗಳನ್ನು ಕಲ್ಪಿಸಲಾಗಿದೆ. ಇಲ್ಲಿ ಉಳಿಯುವ ಸಿಬ್ಬಂದಿಗಳಿಗೆ ವಸತಿ ವ್ಯವಸ್ಥೆ ಹಾಗೂ ಶಿವಮೊಗ್ಗದವರೆಗೆ ಸಾರಿಗೆ ವ್ಯವಸ್ಥೆಯೂ ಇದೆ.
- ಅಲ್ಲದೆ ಮೂಲಭೂತ ಸೌಕರ್ಯಗಳಾದ ನೀರು, ವಿದ್ಯುತ್, ಉತ್ತಮವಾದ ಪಾಕಶಾಲೆ, ಡೈನಿಂಗ್ ಹಾಲ್, ಧ್ಯಾನ ಮಂದಿರವೂ ಇದೆ. ಫಿಜಿಯೋ ಥೆರಪಿ ಸೌಲಭ್ಯದ ಜತೆಯಲ್ಲಿ ವಾಕಿಂಗ್ ಮಾಡುವ, ಗಾಲಿ ಕುರ್ಚಿಯಲ್ಲಿ ಅಡ್ಡಾಡುವ ಅವಕಾಶವೂ ಇವೆ. ರೋಗಿಯ ಜತೆಯಲ್ಲಿ ಸಹಾಯಕರಾಗಿ ಮನೆಯವರೂ ಇರಬಹುದು. ಎಲ್ಲರಿಗೂ ಉತ್ತಮವಾದ ಗುಣಮಟ್ಟದ ಸಮತೋಲನ ಆಹಾರವನ್ನು ಅಗತ್ಯಕ್ಕನುಗುಣವಾಗಿ ನೀಡಲಾಗುವುದು.
- ಆದರೆ ನಮ್ಮಲ್ಲಿ ರೋಗವನ್ನು ಕಂಡುಹಿಡಿಯುವ (Diagnostic) ವ್ಯವಸ್ಥೆಯಿಲ್ಲ. ಅದರ ಅಗತ್ಯವೂ ಇಲ್ಲ. ಅವೆಲ್ಲ ಮುಗಿದು ಇನ್ನೇನು ಜೀವನದ ಕೊನೆಯ ದಿನಗಳನ್ನು ಎದುರಿಸುತ್ತಿರುವ ರೋಗಿಗಳ ಯಾತನೆಯನ್ನು ಕಡಿಮೆ ಮಾಡುವುದೇ ನಮ್ಮ ಮುಖ್ಯ ಉದ್ದೇಶವಾಗಿದೆ.

**4) ರೋಗಿಗಳನ್ನು ಹೇಗೆ ನಿರ್ವಹಿಸುತ್ತೀರಿ?**

■ ಎರಡು ಹಂತಗಳಲ್ಲಿ ಸಂದರ್ಭವನ್ನು ನಿಭಾಯಿಸಲಾಗುವುದು. ಪ್ರಾರಂಭದಲ್ಲಿ ಅಗತ್ಯವಿರುವ (ವೈದ್ಯರ ಸಲಹೆಯಂತೆ) ಔಷಧ ಹಾಗೂ ಆರೈಕೆಯನ್ನು ನೀಡಿ, ಸ್ವಲ್ಪ ಚೇತರಿಸಿಕೊಂಡ ನಂತರ ಅವರಿಗೆ ವೈದ್ಯಕೀಯ ಆಪ್ತ ಸಲಹೆಯನ್ನು ಕೊಟ್ಟು ಧೈರ್ಯ ತುಂಬಿ, ಜೀವನದಲ್ಲಿ ಭರವಸೆಯನ್ನು ಮೂಡಿಸುವುದು ಹಾಗೂ ತಮ್ಮ ನೋವನ್ನು ಮರೆಯಲು ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿ ಮನಸ್ಸು ಚೇತೋಹಾರಿಯಾಗುವಂತೆ ಮಾಡಲಾಗುವುದು. ನಂತರದಲ್ಲಿ ಚಿಕಿತ್ಸೆ ಮತ್ತು ಶುಶ್ರೂಷೆಯನ್ನು ಅಗತ್ಯಕ್ಕನುಗುಣವಾಗಿ ಮುಂದುವರೆಸುವುದು.

**5) ನಿಮ್ಮ ಶ್ರಮಕ್ಕೆ ಸಿಕ್ಕ ಫಲವನ್ನು ವಿವರಿಸುವಿರಾ?**

- ಬಹುತೇಕ ರೋಗಿಗಳ ನೋವು ಕಡಿಮೆಯಾಗಿ ಹಾಸಿಗೆಯಲ್ಲಿದ್ದರೂ ಕೂಡಾ ಬದುಕು ಸಹನೀಯವೆನಿಸಿದೆ.
- ಹಲವರು ಹಾಸಿಗೆಯಿಂದ ಎದ್ದು ಓಡಾಡುವಂತಾಗಿ ಸಮಾಧಾನದಿಂದ ಇದ್ದಾರೆ.
- ಕೆಲವು ರೋಗಿಗಳು ಗುಣಮುಖರಾಗಿ ತಮ್ಮ ಸಹಜ ಜೀವನಕ್ಕೆ ಮರಳಿದ ಉದಾಹರಣೆಗಳೂ ಇವೆ.

ಇವನ್ನೆಲ್ಲ ಕಂಡಾಗ ನಮ್ಮ ಶ್ರಮ ಫಲನೀಡಿದೆ ಎಂಬ ಆತ್ಮತೃಪ್ತಿ ಇದೆ.

**6) ಅವಲಂಬಿತರ ಮಾನಸಿಕ ಸ್ಥಿರತೆ ಕಾಪಾಡಲು ಹಾಕಿಕೊಂಡಿರುವ ಕಾರ್ಯಯೋಜನೆಗಳೇನು- ಧಾರ್ಮಿಕ, ಆಧ್ಯಾತ್ಮಿಕ ಇತ್ಯಾದಿ?**

■ ರೋಗಿಗಳ ಮನಸ್ಥಿತಿಯಾದ ಕೀಳರಿಮೆ, ಅಶಾಂತಿಯನ್ನು ಸುಧಾರಿಸಲು ಆಗಾಗ್ಗೆ ಸಾಂಸ್ಕೃತಿಕವಾಗಿ ಅವರನ್ನು ತೊಡಗಿಸುವ, ಆಧ್ಯಾತ್ಮಿಕ ವಿಚಾರಗಳನ್ನು ತಿಳಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿದ್ದೇವೆ. ಉದಾಹರಣೆಯಾಗಿ ಭಗವದ್ಗೀತೆ ಪಠಣ, ಸದ್ಗ್ರಂಥ ಪಠಣ, ಸ್ತೋತ್ರ ಪಠಣ, ಮಕ್ಕಳಿಂದ ನೃತ್ಯ ಏರ್ಪಡಿಸುವುದು, ಚಂಡೆವಾದನ, ಮುಂತಾದ ಮನೋರಂಜನೆ ಕಾರ್ಯಕ್ರಮಗಳಿವೆ. ವೃತ್ತ ಪತ್ರಿಕೆಗಳೂ ಲಭ್ಯವಿದೆ. ಒಳಾಂಗಣದ ಕ್ರೀಡೆಯ ಸೌಲಭ್ಯವೂ ಇದೆ. ಧ್ಯಾನ, ಪ್ರಾರ್ಥನೆ ಸಲ್ಲಿಸಲು ಧ್ಯಾನ ಮಂದಿರವೂ ನಮ್ಮಲ್ಲಿದೆ. ವಿಚಾರವಂತ ಸಜ್ಜನರು ಇಲ್ಲಿ ಬಂದು ರೋಗಿಗಳಿಗೆ ಸಾಂತ್ವನ ಮಾಡುವ, ಭರವಸೆ ತುಂಬುವ ಅವಕಾಶವನ್ನು ಕಲ್ಪಿಸುತ್ತೇವೆ.

**7) ಸಂಸ್ಥೆ ನಡೆಸಲು ಬೇಕಾದ ಜಾಗ, ಹಣಕಾಸು ಹೊಂದಾಣಿಕೆ ಹೇಗೆ?**

■ ಇಲ್ಲಿಯ 10 ಎಕರೆ ಜಾಗವನ್ನು ಪ್ರಾರಂಭದಲ್ಲಿ ಟ್ರಸ್ಟಿಗಾಗಿ ಕೊಂಡುಕೊಳ್ಳಲಾಗಿದೆ. ಈ ಸಂಸ್ಥೆಯು ಶಿವಮೊಗ್ಗ ಜನರ ಆಸ್ತಿ. ಇದು ವ್ಯಾಪಾರಿ ಮನೋಭಾವದ ಸಂಸ್ಥೆಯಲ್ಲ. ಸಾರ್ವಜನಿಕ ಸಹಾಯವು ದೇಣಿಗೆ ಹಾಗೂ ವಸ್ತುಗಳ ಮೂಲಕವೂ ಬರುತ್ತಿದೆ. ಸ್ಥಳೀಯ ಕೈಗಾರಿಕೋದ್ಯಮಿಗಳು, ದಾನಿಗಳು, ಸಹೃದಯ ಸಂಘ ಸಂಸ್ಥೆಗಳು ನೆರವಿನ ಸಹಾಯ ಹಸ್ತವನ್ನು ನೀಡಿವೆ, ನೀಡುತ್ತಿವೆ.

**8) ಸರಕಾರದ ನೆರವು ಸಿಕ್ಕಿದೆಯೆ? ನೀತಿ ನಿಯಮಗಳೇನು?**

■ ದಿನನಿತ್ಯದ ವೆಚ್ಚದ ನಿರ್ವಹಣೆಗೆ ಸರಕಾರದ ನೆರವಿಲ್ಲ. ಕಟ್ಟಡ ನಿರ್ಮಾಣ, ಕುಡಿಯುವ ನೀರು ಮುಂತಾದ ಸೌಲಭ್ಯಗಳಿಗೆ ಜನಪ್ರತಿನಿಧಿಗಳ ಸಹಾಯನಿಧಿಯಿಂದ ಆಂಶಿಕವಾಗಿ ಸಹಾಯ ವಾಗಿದೆ. ಸಂಸ್ಥೆ ನಡೆಸಲು ಸರಕಾರದ ಲೈಸನ್ಸ್ ಇರಬೇಕು. ಸರ್ಕಾರದ ಜಿಲ್ಲಾ ಆರೋಗ್ಯಕೇಂದ್ರ, ಮಾಲಿನ್ಯ ನಿಯಂತ್ರಣ ಮಂಡಳಿ, ಗ್ರಾಮ ಪಂಚಾಯ್ತಿ ಮುಂತಾದ ವಿಭಾಗಗಳ ಜತೆ ಸಮನ್ವಯ ಹಾಗೂ ಅವರು ವಿಧಿಸುವ ನಿಯಮಗಳನ್ನು ಪಾಲಿಸಬೇಕು. ವೈದ್ಯಕೀಯ ತ್ಯಾಜ್ಯ ನಿರ್ವಹಣೆಗೆ ಮತ್ತು ಸ್ವಚ್ಛತೆಗೂ ಗಮನ ನೀಡಬೇಕು.

**9) ಸಮಾಜದ ಸ್ಪಂದನೆ ಹೇಗಿದೆ? ಸೇವೆ ಮಾಡುವವರಿಗೆ ಅವಕಾಶವಿದೆಯೇ?**

■ ಒಟ್ಟಾರೆಯಾಗಿ ಸಾರ್ವಜನಿಕರಿಂದ ಧನಾತ್ಮಕ ಪ್ರತಿಕ್ರಿಯೆಯಿದೆ. ಇನ್ನು ಹೆಚ್ಚಿನ ಪ್ರಚಾರವಾಗಬೇಕಾಗಿದೆ. ಇಲ್ಲಿ ಬಂದು ಸೇವೆಯಲ್ಲಿ ತೊಡಗಿಕೊಳ್ಳುವವರಿಗೆ ಅವಕಾಶವನ್ನು ಮುಂದಿನ ದಿನಗಳಲ್ಲಿ ಕಲ್ಪಿಸುವ ಆಲೋಚನೆಯೂ ಇದೆ.

**10) ಮುಂದಿನ ಯೋಜನೆಗಳು ಯಾವುವು?**

- ತುಂಬಾ ಉಲ್ಬಣಾವಸ್ಥೆಯಲ್ಲಿರುವ (Crtitically ill) ರೋಗಿಗಳಿಗಾಗಿ ಪ್ರತ್ಯೇಕ ಸುಸಜ್ಜಿತವಾದ 16 ಹಾಸಿಗೆಗಳ ವಾರ್ಡಿನ ನಿರ್ಮಾಣ ಪ್ರಗತಿಯ ಹಂತದಲ್ಲಿದೆ.
- ವಿಶಾಲವಾದ ಧ್ಯಾನಮಂದಿರದ ನಿರ್ಮಾಣದ ಯೋಜನೆಯೂ ಇದೆ.
- ಆಯುರ್ವೇದ ವಿಚಾರದ ಆಧಾರದಲ್ಲಿ ನಕ್ಷತ್ರವನದ ನಿರ್ಮಾಣ ಈಗಾಗಲೇ ಪ್ರಾರಂಭಗೊಂಡಿದ್ದು ರಾಶಿ, ನಕ್ಷತ್ರ, ಗ್ರಹಗಳಿಗೆ ಅನುಸಾರವಾಗಿ ಸಸ್ಯಗಳನ್ನು ಬೆಳೆಸಲಾಗುತ್ತಿದೆ.
- ಮುಂದಿನ ವಿಶೇಷ ಕಲ್ಪನೆಯೆಂದರೆ – ಅನಾಥ ಮಕ್ಕಳಿಗಾಗಿ ಮನೆಯ ವಾತಾವರಣವನ್ನು ಒದಗಿಸುವ "ತಾಯಿಮನೆ" ಯನ್ನು ಸ್ಥಾಪಿಸುವ ಯೋಜನೆಯಿದೆ. ಇಲ್ಲಿ ಉಳಿಯುವ ಮಕ್ಕಳು ತಮ್ಮ ವಿದ್ಯಾಭ್ಯಾಸ, ಮದುವೆ, ಉದ್ಯೋಗ ಕಾರಣಗಳಿಗಾಗಿ ಇಲ್ಲಿಂದ ಹೋದ ನಂತರವೂ ತವರು ಮನೆಗೆ ಬಂದು ಹೋಗುವ ಅವಕಾಶವೂ ಇರಲಿದೆ.
- ಉತ್ತಮವಾದ ಸೌಲಭ್ಯವನ್ನು ಹೊಂದಿರುವ ವೃದ್ಧಾಶ್ರಮದ ಸ್ಥಾಪನೆಯೂ ನಮ್ಮ ಯೋಜನೆಯಲ್ಲಿದೆ.
- ನಮ್ಮ ಪರಿಸರದಲ್ಲಿ ಈಗಾಗಲೇ ವಿವಿಧ ಜಾತಿಯ ಸುಮಾರು 2500 ಸಸ್ಯಗಳಿವೆ. ಇನ್ನೂ ಹೆಚ್ಚಿನ ಗಿಡಗಳನ್ನು ಬೆಳೆಸಿ "ಆಮ್ಲಜನಕ ಸಂಪದ್ಭರಿತ ವಲಯ"ವನ್ನಾಗಿ ಮಾಡುವ ಪ್ರಯತ್ನವೂ ಇದೆ.

ನಿಜವಾಗಲೂ ಸಂಸ್ಥೆಯ ಶ್ರಮ ಸಾರ್ಥಕವಾಗಿದೆ. ಯಾವುದೇ ಫಲಾಪೇಕ್ಷೆ ಇಲ್ಲದೆ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗೆ ಭಗವಂತ ಹಾಗೂ ದಿವ್ಯತ್ರಯರು ಹೆಚ್ಚಿನ ಶಕ್ತಿತುಂಬಲಿ, ಸಹೃದಯರಿಂದ ಸಹಾಯ, ಸಹಕಾರ ಒದಗಿ ಬರಲಿ ಎಂಬ ಪ್ರಾರ್ಥನೆಯೊಂದಿಗೆ ಲೇಖನಕ್ಕೆ ವಿರಾಮ. ■



ಭವ್ಯ ನಿಸರ್ಗ ಸಂಪತ್ತು



ಚಿಕಿತ್ಸಾ ವಿಧಿ



ಸರಳ ತಪಾಸಣೆ



ಭವ್ಯ ಕಾರ್ಯಕ್ಷೇತ್ರ